


# ಬುಡಕಟ್ಟು ಜನಜೀವನದ ಕನ್ನಡಿ

**ಮಧ್ಯಪ್ರದೇಶದ ಬುಡಕಟ್ಟು ಜನಾಂಗಗಳ ಬದುಕಿನ ರೀತಿ ರಿವಾಜುಗಳನ್ನು, ಅವರ ಸಂಸ್ಕೃತಿ– ಪರಂಪರೆಯನ್ನು ಪರಿಚಯಿಸುವ ಪ್ರಯತ್ನ ಭೋಪಾಲ್ ಜನಜಾತೀಯ ಸಂಗ್ರಹಾಲಯದ್ದು.**

■ **ಅರ್ಜುನ್ ಶೆಣೈ**





ಭಾರತದಲ್ಲಿ ಅತಿ ಹೆಚ್ಚು ಸಂಖ್ಯೆಯ ಬುಡಕಟ್ಟು ಸಮುದಾಯ ಇರುವುದು ಮಧ್ಯಪ್ರದೇಶದಲ್ಲಿ. ಅತಿ ಹೆಚ್ಚು ಅರಣ್ಯಭಾಗ ಹೊಂದಿರುವ ರಾಜ್ಯವೂ ಇದುವೇ. ಸ್ಥಳೀಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿರುವ ಬುಡಕಟ್ಟು ಸಮುದಾಯದ ಜನಸಂಖ್ಯೆ ರಾಜ್ಯದಲ್ಲಿ ಶೇ. 21ರಷ್ಟಿದ್ದರೆ, ದೇಶದಲ್ಲಿ ಒಟ್ಟಾರೆ, ಶೇ. 14ರಷ್ಟು ಜನಸಂಖ್ಯೆ ನೆಲೆಯೂರಿರುವುದು ಇಲ್ಲಿಯೇ.

ಮಧ್ಯಪ್ರದೇಶದಲ್ಲಿ ಒಟ್ಟು 46 ಬುಡಕಟ್ಟು ಜನಾಂಗಗಳನ್ನು ಅಧಿಕೃತವಾಗಿ ಗುರುತಿಸಲಾಗಿದೆ. ಅದರಲ್ಲಿ ಬಹುಮುಖ್ಯವೆಂದು ಗುರುತಿಸಿಕೊಂಡಿದ್ದ ಭಿಲ್, ಕೋಲ್, ಕೊರ್ಕು, ಸಹಾರಿಯ, ಬೈಗಾ ಜನಾಂಗಗಳು ಜನಸಂಖ್ಯೆಯ ಆಧಾರದಲ್ಲಿ ಇಳಿಕೆ ಕ್ರಮದಲ್ಲಿವೆ. ಹೀಗಾಗಿ, ಈ ನೆಲದ ಜೀವಾಳವಾಗಿರುವ ಅವರ ಹೆಜ್ಜೆ ಗುರುತುಗಳನ್ನು ಕಾಪಾಡಿಕೊಳ್ಳುವ, ಮುಂದಿನವರಿಗೆ ಪರಿಚಯಿಸುವ ಉದ್ದೇಶದೊಂದಿಗೆ ಆರಂಭಗೊಂಡಿದ್ದು 'ಭೋಪಾಲ್ ಜನಜಾತೀಯ ಸಂಗ್ರಹಾಲಯ'.

ಹೊಸ ತಲೆಮಾರಿಗೆ ಬುಡಕಟ್ಟು ಸಮುದಾಯಗಳ ಜೀವನ ವಿಧಾನವನ್ನು ತಿಳಿಸುವ ಪ್ರಯತ್ನದ ಭಾಗವಾಗಿ ಹತ್ತು ವರ್ಷಗಳ ಹಿಂದೆ ಆರಂಭಗೊಂಡ ಈ 'ಟ್ರೈಬಲ್ ಮ್ಯೂಸಿಯಂ'ಗೆ ಈಚೆಗೆ ಭೇಟಿ ನೀಡಿದಾಗ, ಬುಡಕಟ್ಟು ಸಮುದಾಯದ ಕುರಿತ ಸಾಕಷ್ಟು ಕುತೂಹಲಕರ ಮಾಹಿತಿಗಳು ದಕ್ಕಿದವು.

ಭೋಪಾಲ್‌ನ ಶ್ಯಾಮಲ್ ಹಿಲ್ಸ್‌ನಲ್ಲಿ ನಿರ್ಮಿಸಲಾಗಿರುವ ಈ ಜನಜಾತೀಯ ಸಂಗ್ರಹಾಲಯ ಸುಮಾರು ಏಳು ಎಕರೆಯಷ್ಟು ವಿಸ್ತಾರವಿದೆ. ಸಂಗ್ರಹಾಲಯವನ್ನು ಆರು ಪರಿಕಲ್ಪನೆಗಳೊಂದಿಗೆ ರೂಪಿಸಲಾಗಿದೆ. 'ಜೀವನ್‌ಶೈಲಿ', 'ಸಾಂಸ್ಕೃತಿಕ್ ವೈವಿಧ್ಯ', 'ಕಾಲಬೋಧ್', 'ದೇವಲೋಕ್', 'ಛತ್ತೀಸ್‌ಗಢ ದಿರ್ಗಾ', 'ರಕ್ಕು ದಿರ್ಗಾ' ಎಂಬ ವಿಭಾಗಗಳಲ್ಲಿ ಹಲವು ವಸ್ತುಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಸ್ಥಳೀಯ ಪ್ರಮುಖ ಬುಡಕಟ್ಟು ಜನಾಂಗಗಳಾದ ಗೋಂಡಾ, ಭಿಲ್, ಭಾರಿಯ, ಸಹಾರಿಯ, ಕೊರ್ಕು, ಕೋಲ್, ಬೈಗಾಗಳ ವಿವಿಧ ಕಲಾಪ್ರಕಾರಗಳು, ಕರಕುಶಲ ಸಾಮಗ್ರಿಗಳು ಮತ್ತು ಸಂಸ್ಕೃತಿಯನ್ನು ಬಿಂಬಿಸುವ ಭಿತ್ತಿಚಿತ್ರ, ವಸ್ತು ಮಾದರಿಗಳು ಹಲವಿವೆ. ಜನನದಿಂದ ಮರಣ ಹೊಂದುವವರೆಗೂ ಇವರ ಸಮುದಾಯದಲ್ಲಿನ ಅನೇಕ ಸಂಪ್ರದಾಯಗಳು, ನಂಬಿಕೆ, ಆಚರಣೆಗಳು, ಜೀವನಶೈಲಿಯನ್ನು ಎಳೆಎಳೆಯಾಗಿ ತೆರೆದಿಡಲಾಗಿದೆ.

ಆಯಾಯ ಜನಾಂಗಗಳ ಹುಟ್ಟಿಗೆ ಕಾರಣವಾದ ಹತ್ತಾರು ಕಥೆಗಳನ್ನು ಕೂಡ ಮಾದರಿಗಳ ಸಹಾಯದಿಂದ ಪ್ರದರ್ಶಿಸಲಾಗಿದೆ. ಅಷ್ಟಭುಜಾಕೃತಿಯಲ್ಲಿ ಎರಡಂತಸ್ತಿನ ಮದುವೆ ಮಂಟಪದ ಮಾದರಿಯನ್ನು ಇರಿಸಲಾಗಿದ್ದು, ಭೂಮಿ–ಆಕಾಶಕ್ಕೆ ಗೌರವ ಸಮರ್ಪಿಸಿದಂತೆ ಅದು ಕಾಣುತ್ತದೆ. ಸಂಗ್ರಹಾಲಯದ ಒಂದು ಭಾಗದಲ್ಲಿ ದೊಡ್ಡ ಬಳೆಯ ಆಕೃತಿಯನ್ನು ಪ್ರದರ್ಶಿಸಲಾಗಿದ್ದು, ಬುಡಕಟ್ಟು ಮದುವೆಯಲ್ಲಿ ಮದುಮಗಳಿಗೆ ನೀಡುವ ಚಿನ್ನದ ಬಳೆಯನ್ನು ಇದು ಪ್ರತಿನಿಧಿಸುತ್ತದೆ.

ಬುಡಕಟ್ಟು ಜನಾಂಗಗಳ ಮನೆಯ ಮಾದರಿಗಳನ್ನೂ ಇಲ್ಲಿ ಕಾಣಬಹುದು. ಚಿನ್ನಿದಾಂಡು, ಮರಕೋತಿ, ಹಗ್ಗಜಗ್ಗಾಟ, ಲಗೋರಿ ಇನ್ನಿತರ ಗ್ರಾಮೀಣ ಕ್ರೀಡೆಗಳ ಮಾದರಿಗಳನ್ನು ಪ್ರದರ್ಶಿಸಲಾಗಿದೆ. ಗ್ಯಾಲರಿಯ ಒಂದು ಪೂರ್ಣ ಭಾಗ ಬಿದಿರಿನಿಂದಾವೃತವಾಗಿದ್ದು, ಅದು 'ಬಾಸಿನ್‌ಕನ್ಯಾ' ಎಂಬ ಬಿದಿರು ಹುಟ್ಟಿಕೊಂಡ ಕಥೆಯನ್ನು ನಿರ್ದೇಶಿಸುತ್ತದೆ. ಸಂಗ್ರಹಾಲಯದೊಳಗೆ ಒಂದು ಪುಸ್ತಕದಂಗಡಿ ಮತ್ತು ಮಳಿಗೆಯೂ ಇದೆ. ಆಧುನಿಕ ಸ್ಪರ್ಶಕ್ಕೆ ಒಗ್ಗಿರುವ ಸಂಗ್ರಹಾಲಯದಲ್ಲಿ ಮಾಹಿತಿ ಬೆರಳತುದಿಯಲ್ಲೇ ಲಭ್ಯ. ಪ್ರತಿಯೊಂದು ಮಾದರಿಯ ಎದುರು ಒಂದು ಕ್ಯೂಆರ್ ಕೋಡನ್ನು ಕಾಣಬಹುದು. ಅದನ್ನು ಮೊಬೈಲಿನಲ್ಲಿ ಸ್ಕ್ಯಾನ್ ಮಾಡಿದರೆ ಅದರ ಬಗೆಗೆ ಹೆಚ್ಚಿನ ಮಾಹಿತಿಯ ಧ್ವನಿ ಮುದ್ರಣ ಕೇಳಿಸಿಕೊಳ್ಳಬಹುದು.

ಭೋಪಾಲ್‌ನ ಪ್ರಮುಖ ಆಕರ್ಷಣೆಯಾಗಿರುವ ಈ ಜನಜಾತೀಯ ಸಂಗ್ರಹಾಲಯ, ಇಡೀ ರಾಜ್ಯದ ಸಂಸ್ಕೃತಿಯನ್ನು ತನ್ನೊಳಗೆ ಹಿಡಿದಿಟ್ಟುಕೊಂಡ ಸ್ಥಳ ಎನ್ನಬಹುದು. ■